ಒಂದೂರಿನಲ್ಲಿ ಒಬ್ಬ ರಾಜನಿದ್ದ. ಅವನು ತನ್ನ ಶತ್ರುಗಳನ್ನೂ ಮಿತ್ರರಂತೆ ಗೌರವಿಸುತ್ತಿದ್ದ. ಒಂದು ದಿನ ಅವನು ತನ್ನ ಅರಮನೆಯ ಎಲ್ಲಾ ಮಂತ್ರಿ ಮಹೋದಯರನ್ನು ಕುರಿತು, 'ಹೇಗಾದರೂ ಮಾಡಿ ನಮ್ಮ ಶತ್ರುಗಳನ್ನು ಉಸಿರೆತ್ತದಂತೆ ಸದೆಬಡಿಯಬೇಕು' ಎಂದನು. ಆದರೆ ಮಂತ್ರಿಮಹೋದಯರುಗಳು ಯಾರೂ ರಾಜನ ಮಾತನ್ನು ಅಷ್ಟಾಗಿ ಗಣನೆಗೆ ತೆಗದುಕೊಳ್ಳಲೇ ಇಲ್ಲ. ರಾಜ ಮಾತ್ರ ಪ್ರತಿದಿನವೂ, 'ನಮ್ಮ ಶತ್ರುಗಳನ್ನು ಉಸಿರೆತ್ತದಂತೆ ಮಾಡಬೇಕು' ಎಂದು ಹೇಳುತ್ತಿದ್ದನು. ಹೀಗಿರುವಾಗ ಹಲವು ದಿನಗಳ ನಂತರ ರಾಜ ತನ್ನ ವೈರಿ ರಾಜರುಗಳನ್ನೆಲ್ಲಾ ತನ್ನ ಅರಮನೆಗೆ ಆಹ್ವಾನಿಸಿದನು. ಅವನು ಅವರನ್ನೆಲ್ಲ ಬಹಳ ಮರ್ಯಾದೆಯಿಂದ ಸತ್ಕರಿಸಿದನು. ಅವರೆಲ್ಲ ಒಂದು ವಾರ ಕಾಲ ಅರಮನೆಯಲ್ಲೇ ತಂಗಿದ್ದು ಭೂರೀ ಭೋಜನ ಸವಿಯುತ್ತ ಆರಾಮವಾಗಿ ಕಾಲ ಕಳೆದರು. ರಾಜನ ಈ ವಿಚಿತ್ರ ವರ್ತನೆ ಕಂಡು ಮಂತ್ರಿಗಳೆಲ್ಲ, 'ನಮ್ಮ ರಾಜ ಇಲ್ಲಿಗೆ ಆಗಮಿಸಿರುವ ಶತ್ರುರಾಜರುಗಳನ್ನೆಲ್ಲ ಸಮಯ ನೋಡಿಕೊಂಡು ರಾತ್ರೋರಾತ್ರಿ ಅವರನ್ನೆಲ್ಲಾ ಮುಗಿಸಿ ಬಿಡಬಹುದು' ಎಂದು ಮಾತಾಡಿಕೊಂಡರು. ಮತ್ತೆ ಒಂದು ವಾರ ಕಳೆಯಿತು. ಆದರೆ ಮಂತ್ರಿ ಮಹೋದಯರು ಎಣಿಸಿದಂತೆ ಏನೂ ನಡೆಯಲೇ ಇಲ್ಲ. ಬಂದ ರಾಜರೆಲ್ಲ ರಾಜನ ಸತ್ಕಾರದಿಂದ ಸಂತೃಪ್ತಿಗೊಂಡು ತಮ್ಮ ತಮ್ಮ ರಾಜ್ಯಗಳಿಗೆ ಹಿಂತಿರುಗಿದರು.

ಮಾರನೆಯ ದಿನ ಎಂದಿನಂತೆ ಸಭೆ ಸೇರಿದಾಗ ಮಂತ್ರಿ ಮಹೋದಯರುಗಳೆಲ್ಲ ರಾಜನನ್ನು ಕುರಿತು, 'ಪ್ರಭುಗಳೇ ನೀವು ಮಾಡಿದ್ದು ಸರಿಯೇ? ಶತ್ರು ರಾಜರುಗಳನ್ನು ಸದೆ ಬಡಿಯಬೇಕೆಂದು ಹೇಳುತ್ತಿದ್ದವರು ಅವರನ್ನು ಗೌರವ ಪೂರ್ವಕವಾಗಿ ಆಹ್ವಾನಿಸಿದಿರಿ! ಅವರೆಲ್ಲಾ ಚೆನ್ನಾಗಿ ತಿಂದು ತೇಗಿ ಸಂತೃಪ್ತಪಟ್ಟು ಹಿಂದಿರುಗಿದರಷ್ಟೆ. ಇದರಿಂದ ನೀವು ಹೇಗೆ ಅವರನ್ನು ಸದೆಬಡಿದಂತಾಯಿತು? ಅವರೇನು ನಮ್ಮ ಮಿತ್ರರೋ ಅಥವಾ ಶತ್ರುಗಳೋ?' ಎಂದು ಕೇಳಿದರು.

ಅದಕ್ಕೆ ರಾಜನು ನಸುನಗುತ್ತ, 'ಮಂತ್ರಿಗಳೇ ನಾನೀಗಾಗಲೇ ನಮ್ಮ ಶತ್ರು ರಾಜರುಗಳನ್ನೆಲ್ಲಾ ಸದೆಬಡಿದಾಗಿದೆ. ಈಗ ಅವರೆಲ್ಲ ನನ್ನ ಮಿತ್ರರಾಗಿ ಹೋಗಿದ್ದಾರೆ. ಶತ್ರುಗಳನ್ನು ಸದೆಬಡಿಯುವುದೆಂದರೆ ಅವರನ್ನು ನಿಜವಾಗಿಯೂ ಸದೆಬಡಿಯುವುದೆಂದಲ್ಲ. ಹಾಗೆಂದರೆ ಅವರನ್ನು ಮಿತ್ರರನ್ನಾಗಿ ಮಾಡಿಕೊಂಡು ನಮ್ಮ ಬಗ್ಗೆ ಅವರಿಗಿರುವ ಶತ್ರುತ್ವವನ್ನು ಅಳಿಸಿ ಹಾಕುವುದು ಮತ್ತು ಅವರನ್ನು ನಮ್ಮವರನ್ನಾಗಿ ಮಾಡಿಕೊಳ್ಳಬೇಕೆಂಬುದೇ ಅದರ ಅರ್ಥ! ನಿಮಗೆ ತಿಳಿದಿರುವಂತೆ ನಮ್ಮ ಅತಿಥಿಯಾಗಿ ಬಂದಿದ್ದ ಅವರೆಲ್ಲ ಈಗ ನಮ್ಮ ಮಿತ್ರರೇ ಆಗಿದ್ದಾರೆ. ಅಲ್ಲಿಗೆ ನಮ್ಮ ಬಗ್ಗೆ ಅವರಿಗಿದ್ದ ಶತ್ರುತ್ವವನ್ನೆಲ್ಲ ಅಳಿಸಿ ಹಾಕಿದಂತಾಯಿತಲ್ಲ' ಎಂದನು. ಇದು ಮೊದಲಿನಿಂದಲೂ ಆ ರಾಜ ಪರಿಪಾಲಿಸುತ್ತಿದ್ದ ನೀತಿಯಾಗಿತ್ತು. ಮಂತ್ರಿಗಳೆಲ್ಲ ತಮ್ಮ ದಡ್ಡತನಕ್ಕೆ ನಾಚಿ ಸುಮ್ಮನಾದರು.